ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

21

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 21/9/2020

# ವಿದೇಶಿ ದೇಣಿಗೆ ದುರ್ಬಳಕೆ ತಡೆಗೆ ಸಿದ್ಧತೆ

21/9/20

**ನವದೆಹಲಿ:** 2011ರಲ್ಲಿ ಜಾರಿಗೆ ಬಂದಿದ್ದ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ (ಎಫ್‌ಸಿಆರ್‌ಎ) ತಿದ್ದುಪಡಿ ವಿಧೇಯಕವನ್ನು ಕೇಂದ್ರ ಸರ್ಕಾರ, ಲೋಕಸಭೆಯಲ್ಲಿ ಭಾನುವಾರ ಮಂಡಿಸಿದೆ. ವಿವಿಧ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒಗಳು) ಪಡೆಯುವ ವಿದೇಶಿ ದೇಣಿಗೆಗಳ ದುರ್ಬಳಕೆ ತಡೆಯುವ ಉದ್ದೇಶದಿಂದ ಈ ವಿಧೇಯಕವನ್ನು ರೂಪಿಸಲಾಗಿದೆ.

ಎನ್‌ಜಿಒಗಳ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ತಮ್ಮ ಆಧಾರ್ ಸಂಖ್ಯೆಯನ್ನು ಸಲ್ಲಿಸುವುದು ಕಡ್ಡಾಯಗೊಳಿಸುವುದು, ವಿದೇಶಿ ದೇಣಿಗೆಯ ಬಳಕೆಯನ್ನು ಸೀಮಿತಗೊಳಿಸುವುದು ಸೇರಿದಂತೆ ಹಲವಾರು ಪ್ರಮುಖ ತಿದ್ದುಪಡಿಗಳನ್ನು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ.

**ಏಕೆ ತಿದ್ದುಪಡಿ?:** ದೇಶದ ಹಲವಾರು ಸರ್ಕಾರೇತರ ಸಂಸ್ಥೆಗಳು, ಇನ್ನಿತರ ಸಂಘ-ಸಂಸ್ಥೆಗಳು ತಾವು ಪಡೆದ ವಿದೇಶಿ ದೇಣಿಗೆಗೆ ಸಂಬಂಧಿಸಿ ಅವ್ಯವಹಾರ ನಡೆಸಿರುವುದು, ಸೂಕ್ತ ದಾಖಲೆಗಳನ್ನು ಇಟ್ಟುಕೊಳ್ಳದಿರುವುದು ಹಾಗೂ ದೇಣಿಗೆ ಪಡೆಯುವ ಪರವಾನಗಿಯನ್ನು ದುರ್ಬಳಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ನಿರ್ಧರಿಸಿದೆ.

## ತಿದ್ದುಪಡಿಯ ಪ್ರಮುಖಾಂಶ

- ಸರ್ಕಾರಿ ಅಧಿಕಾರಿಗಳು ವಿದೇಶಿ ದೇಣಿಗೆ ಅಥವಾ ವಿದೇಶಿ ಆರ್ಥಿಕ ನೆರವನ್ನು ಪಡೆಯುವುದಕ್ಕೆ ಹೊಸ ವಿಧೇಯಕದಲ್ಲಿ ನಿರ್ಬಂಧ.
- ಸರ್ಕಾರೇತರ ಸಂಸ್ಥೆಗಳು ಗಳಿಸುವ ವಿದೇಶಿ ದೇಣಿಗೆ ಬಳಕೆಯ ಮಿತಿ ಶೇ.50ರಿಂದ ಶೇ. 20ಕ್ಕೆ ಇಳಿಕೆ.
- ಸರ್ಕಾರೇತರ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿರುವ ಸದಸ್ಯರು ತಮ್ಮ ಆಧಾರ್ ಸಂಖ್ಯೆಯನ್ನು ಸರ್ಕಾರಕ್ಕೆ ಸಲ್ಲಿಸುವುದು ಕಡ್ಡಾಯ.
- ವಿದೇಶಿ ದೇಣಿಗೆಗಳನ್ನು ಸ್ವೀಕರಿಸುವ ಎಲ್ಲಾ ಸಂಘ-ಸಂಸ್ಥೆಗಳೂ ಇನ್ನು ತಮ್ಮ ಆಧಾರ್ ಸಂಖ್ಯೆ ನೀಡುವುದು ಕಡ್ಡಾಯ.
- ವಿದೇಶಿ ದೇಣಿಗೆ ಪಡೆಯಲು ಪರವಾನಗಿ ಪಡೆದ ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆ, ಎಫ್‌ಸಿಆರ್‌ಎ ಹೆಸರಿನ ಬ್ಯಾಂಕ್ ಖಾತೆಯ ಮೂಲಕವೇ ದೇಣಿಗೆ ವ್ಯವಹಾರ ನಡೆಸಬೇಕು. ಇಂಥ ಬ್ಯಾಂಕ್ ಖಾತೆಗಳು ಎಸ್‌ಬಿಐನಲ್ಲೇ ಇರುವುದು ಕಡ್ಡಾಯ.

## ಪರಿಣಾಮಗಳೇನು?

- ಎಫ್‌ಸಿಆರ್‌ಎ ತಿದ್ದುಪಡಿಯಿಂದ ಸರ್ಕಾರೇತರ ಸಂಸ್ಥೆಗಳ ವ್ಯವಹಾರಗಳು ಮತ್ತಷ್ಟು ಪಾರದರ್ಶಕ.
- ವಿವಿಧ ಸಂಘ ಸಂಸ್ಥೆಗಳಿಗೆ ಬರುವ ವಿದೇಶಿ ದೇಣಿಗೆಗಳು ಜನೋಪಯೋಗಿ ಕಾರ್ಯಕ್ಕೆ ಮಾತ್ರ ಬಳಸಲು ಅನುವು.
- ಸಂಘ ಸಂಸ್ಥೆಗಳ ಮೂಲಕ ವಿದೇಶಿ ಹಣ ಅಥವಾ ಕಪ್ಪು ಹಣವು ಖಾಸಗಿ ವ್ಯಕ್ತಿಗಳಿಗೆ ವರ್ಗಾವಣೆಯಾಗುವಂಥ ಅಕ್ರಮ ವ್ಯವಹಾರಗಳಿಗೆ ಕಡಿವಾಣ.
- ವಿದೇಶಿ ದೇಣಿಗೆಯ ದುರುಪಯೋಗ ಕಂಡುಬಂದಲ್ಲಿ ಅದನ್ನು ಪ್ರಶ್ನಿಸುವ ಹಾಗೂ ದೇಣಿಗೆಯನ್ನು ಅಮಾನತಿನಲ್ಲಿಡುವ ಹಾಗೂ ಇಡೀ ಪ್ರಕರಣವನ್ನು ಸೂಕ್ತ ತನಿಖೆ ನಡೆಸುವಲ್ಲಿ ಸರ್ಕಾರಕ್ಕೆ ಪರಮಾಧಿಕಾರ.